**ದಿನಾಂಕ 15.10.2025** **ಸಿಸಿ 2130/2022**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.** **ಪಿಡಬ್ಲ್ಯೂ 1**

**ಪಾಟೀ ಸವಾಲುಃ** ಆರೋಪಿ ಪರ ವಕೀಲರಿಂದಃ

ನಾನು 10 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ಇಂಗ್ಲೀಷ ಭಾಷೆ ಓದಲು ಬರೆಯಲು ಬರುವುದಿಲ್ಲ. ಆರೋಪಿ ನನಗೆ ಸುಮಾರು 10 ವರ್ಷಗಳಿಂದ ಪರಿಚಯ. ನನ್ನ ತಂದೆ ಮತ್ತು ಅರೋಪಿಯ ತಂದೆ ಸುಮಾರು 20 ವರ್ಷಗಳಿಂದ ಪರಿಚಯಸ್ಥರು. ಆರೋಪಿಯ ತಂದೆ ತಾಯಿಯ ಹೆಸರು ಶರಣೇಂದ್ರಯ್ಯ ಮತ್ತು ಮಂಗಳಮ್ಮ. ಆರೋಪಿಯ ತಂದೆ ಪೊಲೀಸ್ ಇಲಾಖೆಯಲ್ಲಿ ಮುಖ್ಯ ಪೇದೆಯಾಗಿದ್ದರು. ಆರೋಪಿಯ ತಂದೆ ದಿನಾಂಕ 03.12.2022 ರಂದು ಮೃತರಾಗಿರುತ್ತಾರೆ.

ನಿಪಿ 3 ನೋಟಿಸನಲ್ಲಿ ನನ್ನ ಸಹಿ ಇದೆ. ನಿಪಿ 3 ಕ್ಕೆ ನಾನೇ ಮಾತಿಹಿ ನೀಡಿರುತ್ತೇನೆ. ನಿಪಿ 3 ನ್ನು ದಿಃ 19.05.2022 ರಂದು ಆರೋಪಿಗೆ ನೀಡಿರುತ್ತೇನೆ. ನಿಪಿ 3 ನೋಟಿಸಿಗೆ ನಾನು ಒಬ್ಬನೇ ಮಾಹಿತಿ ನೀಡಿಲು ಹೋಗಿದ್ದೆ. ಮಾಹಿತಿ ನೀಡಲು ನನ್ನ ವಕೀಲರ ಬಳಿ ಹೋದಾಗ ಬ್ಯಾಂಕಿನವರು ನೀಡಿದ ರಿಟರ್ನ ಮೆಮೊ ವನ್ನು ತೆಗೆದುಕೊಂಡು ಹೋಗಿದ್ದೆ. 2016 ರಲ್ಲಿ ನನಗೆ ಅಪಘಾತವಾದಾಗ ಸುಮಾರು ನಾಲ್ಕು ತಿಂಗಳುಗಳ ಕಾಲ ನಾನು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತೇನೆ. ಆ ಕಾಲಕ್ಕೆ ಸುಮಾರು ರೂ.1.50 ಲಕ್ಷ ಖರ್ಚು ಆಗಿರುತ್ತದೆ. ಸದರಿ ಹಣವನ್ನು ನಾನು ಬೇರೆಯವರಿಂದ ಸಾಲ ಪಡೆದು ಆಸ್ಪತ್ರೆಗೆ ಪಾವತಿ ಮಾಡಿರುತ್ತೇನೆ. ಆಸ್ಪತ್ರೆಯಿಂದ ಬಂದ ನಂತರ ನಾನು ಅಪಘಾತದ ವಿಚಾರವಾಗಿ ಪರಿಹಾರವನ್ನು ಕೋರಿ ನ್ಯಾಯಾಲಯಕ್ಕೆ ಎಂವಿಸಿ 584/2017 ರಂತೆ ಅರ್ಜಿಯನ್ನು ಸಲ್ಲಿಸಿದ್ದೆ ಎಂದರೆ ಸರಿ. ಸದರಿ ಅರ್ಜಿಯ ದಾಖಲೆಗಳನ್ನು ನಾನು ನನ್ನ ವಕೀಲರಿಗೆ ಕೊಟ್ಟಿರುತ್ತೇನೆ. ಸದರಿ ಅರ್ಜಿಯು ಪುಸ್ಕರಿಸಿದ ಮೇಲೆ ನ್ಯಾಯಾಲಯದ ಆದೇಶ ಮೇರೆಗೆ ಇನ್ಸುರೆನ್ಸ ಕಂಪನಿಯವರು ನನಗೆ ರೂ.7.50 ಲಕ್ಷ ಪರಿಹಾರದ ಹಣ ಒಂದೇ ಕಂತಿನಲ್ಲಿ 2022 ರ ಡಿಸೆಂಬರ ತಿಂಗಳಿನಲ್ಲಿ ನೀಡಿರುತ್ತಾರೆ. ಸದರಿ ಹಣ ನನ್ನ ಖಾತೆಗೆ ಜಮೆ ಆಗಿರುತ್ತದೆ. ಸದರಿ ಖಾತೆಗೆ ಸಂಬಂಧಿದ ಪಾಸು ಪುಸ್ತಕವನ್ನು ನ್ಯಾಯಾಲಯಕ್ಕೆ ಹಾಜರಪಡಿಸಲು ತೊಂದರೆ ಇಲ್ಲ ಎಂದರೆ ಸರಿ.

ಮೊದಲ ಬಾರಿಗೆ ಆರೋಪಿ ಮತ್ತು ಅವರ ತಂದೆ ನನ್ನ ಬಳಿ ಹಣ ಕೇಳಲು 2021ರ ನವೆಂಬರ ತಿಂಗಳಿನಲ್ಲಿ ನನ್ನ ಊರಾದ ಕುಣೆಬೆಳಕೆರೆಯ ನನ್ನ ಮನೆಗೆ ಬಂದಿದ್ದರು. ಆಗ ಮನೆಯಲ್ಲಿ ನಾನು ಒಬ್ಬನೇ ಇದ್ದೆ. ಆಗ ಅವರು ರೂ. 8.00 ಲಕ್ಷ ಹಣವನ್ನು ಕೇಳಿದ್ದರು. ಸದರಿ ಹಣ ತಮ್ಮ ವ್ಯವಹಾರಕ್ಕೆ ಬೇಕು ಎಂದು ಕೇಳಿದ್ದರು. ನಾನು ದಿನಾಂಕ 09.01.2022 ರಂದು ಹಣ ನೀಡಿರುತ್ತೇನೆ. ಸದರಿ ದಿನದಂದು ರೂ.6.50 ಲಕ್ಷ ಹಣವನ್ನು ಆರೋಪಿಗೆ ಕೊಟ್ಟಿರುತ್ತೇನೆ. ಸದರಿ ದಿನದಂದು ನನ್ನ ಬಳಿ ರೂ. 6.50 ಲಕ್ಷ ಹಣ ಇತ್ತು ಎಂದು ತೋರಿಸಲು ಯಾವುದಾದರೂ ದಾಖಲೆ ಇದೆಯೇ ಎಂದರೆ ಸಾಕ್ಷಿಯು ಇದೆ ಎಂದು ನುಡಿಯತ್ತಾರೆ. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ. ನಾನು ರೂ.6.50 ಲಕ್ಷ ಹಣವನ್ನು ಆರೋಪಿಗೆ ಕೊಡುವ ಕಾಲಕ್ಕೆ ಆರೋಪಿ ಮಾತ್ರ ಬಂದಿದ್ದರು. ಆರೋಪಿ ಸದರಿ ಹಣವನ್ನು ಮೂರು ತಿಂಗಳು ಗಳ ನಂತರ ವಾಪಸ್ಸು ಕೊಡುತ್ತೇನೆ ಎಂದು ಹೇಳಿದ್ದರು. ನಾನು ಹಣ ನೀಡಿದ ದಿನದಿಂದೇ ಆರೋಪಿಯು ನನಗೆ ಚೆಕ್ ನ್ನು ನೀಡಿರುತ್ತಾರೆ. ಆ ಕಾಲಕ್ಕೆ ನಾನು ಒಬ್ಬನೇ ಇದ್ದೆ. ನಿಪಿ 3 ರಲ್ಲಿ **ನೀವು ನನ್ನ ಕಕ್ಷಿದಾರರಿಂದ ಪಡೆದಂತ ಸಾಲವನ್ನು ಮೂರು ತಿಂಗಳ ಅವಧಿಗೆ ಸರಿಯಾಗಿ ತಿರುವಳಿ ಮಾಡುತ್ತೇನೆಂದು ಅಂದರೆ, 10.05.2022 ರಂದು ಪಡೆದುಕೊಂಡಿರುತ್ತೀರಿ** ಎಂದು ನಮೂದು ಇದೆ ಎಂದರೆ ಸರಿ. ಆರೋಪಿಯು ಎಕ್ಸಿಸ್ ಬ್ಯಾಂಕ್, ಬೆಂಗಳೂರು ಶಾಖೆಯ ಚೆಕ್ ನಂ. 185445 ನ್ನು ನೀಡಿರುತ್ತಾರೆ. ಸಾಲ ನೀಡಿದ ಮೂರು ತಿಂಗಳ ಅವಧಿ ಮುಗಿದ ನಂತರ ನಾನು ಆರೋಪಿಗೆ ಸುಮಾರು 10 ಬಾರಿ ಹಣ ವಾಪಸ್ ಕೊಡುಂವತೆ ದೂರವಾಣಿ ಕರೆ ಮೂಲಕ ಕೇಳಿರುತ್ತೇನೆ. ಈ ವಿಚಾರವನ್ನು

ನಿಪಿ 3 ನೋಟಿಸಿಗೆ ಮಾಹಿತಿ ನೀಡುವಾಗ ನನ್ನ ವಕೀಲರಿಗೆ ಹೇಳಿರುತ್ತೇನೆ. ಅರೋಪಿಯ ಮೊಬೈಲ್ ಸಂಖ್ಯೆ ನನಗೆ ನೆನಪಿಲ್ಲ. ನಿಪಿ 1 ಚೆಕ್ ನಲ್ಲಿ ಆರೋಪಿಯೇ ಬರವಣಿಗೆ ಮಾಡಿ ಸಹಿ ಮಾಡಿ ಕೊಟ್ಟಿರುತ್ತಾರೆ. ಸದರಿ ಚೆಕ್ ನ್ನು ದಿನಾಂಕ 16.05.2022 ರಂದು ನಗದೀಕರಣಕ್ಕಾಗಿ ಸಲ್ಲಿಸಿರುತ್ತೇನೆ. ಆಗ ಸದರಿ ಚೆಕ್ **Payment stopped by Drawer** ಎಂಬ ಹಿಂಬರಹದೊಂದಿಗೆ ವಾಪಸ್ಸಾಗಿರುತ್ತದೆ. ನಿಪಿ 1 ಚೆಕ್ ನ್ನು ನಗದೀಕರಣಕ್ಕೆ ಸಲ್ಲಿಸುವಾಗ ಅದರ ಜೊತೆಗೆ ಜಮಾ ಚೀಟಿಯನ್ನು ಬೇರೆಯವರಿಂದ ಬರೆಯಿಸಿ ಸಲ್ಲಿಸಿರುತ್ತೇನೆ. ಸದರಿ ಜಮಾ ಚೀಟಿಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಹಾಜರುಪಡಿಸಿಸಲು ತೊಂದರೆ ಇಲ್ಲ ಎಂದರೆ ಸರಿ.

(ಸಾಕ್ಷಿಯ ಮುಂದುವರೆದ ಪಾಟೀ ಸವಾಲಿಗಾಗಿ ಆರೋಪಿ ಪರ ವಕೀಲರು ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.)

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ, ಹರಿಹರ